**2ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ**
**ಪಿ.ಸಿ.ಆರ್ ನಂ.ಃ 14963 ಃ 2022**

| | | | |
|---|---|---|---|
| ಸಾಕ್ಷಿದಾರನ ಹೆಸರು | ಸಿ ಜಯರಾಂ | ಸಿ ಡಬ್ಲ್ಯು | 2 |
| ತಂದೆಯ ಹೆಸರು | ಚಿನ್ನಪ್ಪ | | |
| ವಯಸ್ಸು | 67 ವರ್ಷ | | |
| ಉದ್ಯೋಗ | ವ್ಯಾಪಾರ | | |
| ವಾಸಸ್ಥಾನ | ಮೈಸೂರು ರಸ್ತೆ, ಟೋಲ್ ಗೇಟ್, ಬೆಂಗಳೂರು | | |

**ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 24.06.2023**

**ಪ್ರಮಾಣ ಪೂರ್ವಕ ಹೇಳಿಕೆ ಃ-**

ಪಿರ್ಯಾದಿ ನನ್ನ ಹೆಂಡತಿಯ ಸಹೋದರಿಯ ಮಗಳು. ನವೆಂಬರ್ 2021 ರಲ್ಲಿ ಆಕೆಯ ಮದುವೆಯನ್ನು 1 ನೇ ಆರೋಪಿಯ ಜೊತೆ ಮಾಡಿರುತ್ತೇವೆ. ಅವರ ಮದುವೆಗೆ ಸುಮಾರು 60-65 ಲಕ್ಷ ರೂ ಖರ್ಚಾಗಿರುತ್ತದೆ. ಮದುವೆಯಾದ ನಂತರ 1 ನೇ ಆರೋಪಿ ಪಿರ್ಯಾದಿಯ ಬಳಿ ಕೆಲಸ ಬಿಟ್ಟು ಮನೆಯಲ್ಲಿರುವಂತೆ ಹೇಳಿ ಪಿರ್ಯಾದಿಯ ಕೆಲಸಕ್ಕೆ ರಾಜಿನಾಮೆ ಕೊಡಿಸಿರುತ್ತಾರೆ. ನಂತರ 1 ನೇ ಆರೋಪಿ ಅವರ ಬೆಡ್ ರೂಂ ನಲ್ಲಿ ಯಾರಿಗೂ ಗೊತ್ತಗದಂತೆ ಹಿಡನ್ ಕ್ಯಾಮರ ಅಳವಡಿಸಿ ಅದರಲ್ಲಿ ರೆಕಾರ್ಡ್ ಆಗುವ ದೃಶ್ಯಗಳನ್ನು ಅವರು ನೋಡಿ ಬೇರೆಯವರಿಗೂ ತೋರಿಸಿ ಅದರಿಂದ ಸಂತೋಷ ಪಡುತ್ತಿದ್ದರು. ಅದರಿಂದ ಪಿರ್ಯಾದಿಯ ಘನತೆಗೆ ಧಕ್ಕೆಯಾಗಿರುತ್ತದೆ. ಪಿರ್ಯಾದಿ ವಿಡಿಯೋಗಳನ್ನು ಬೇರೆಯವರಿಗೆ ಫಾರ್ವಡ್ ಮಾಡುತ್ತಿದ್ದಾರೆ ಎಂದು 1 ನೇ ಆರೋಪಿ ಆರೋಪಿಸಿರುತ್ತಾರೆ. 2 ನೇ ಆರೋಪಿ ಪಿರ್ಯಾದಿಗೆ ಅನಾವಶ್ಯಕವಾಗಿ ಕಿರುಕುಳ ಕೊಡುತ್ತಿದ್ದರು. ಪಿರ್ಯಾದಿಯ ಅಜ್ಜಿ ಮನೆ ಮಾಲೂರಿನಲ್ಲಿದೆ. ಅಲ್ಲಿ 1 ನೇ ಆರೋಪಿ ಫೊಟೋಗಳನ್ನು ತೋರಿಸಿರುತ್ತಾರೆ.

**( ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸ ಇದೆ**

**(ವೇದಮೂರ್ತಿ ಬಿ.ಎಸ್.)**
**2ನೇ ಅ ಮು ಮ ದಂ.**